ತಲೆಯಲ್ಲಿ ಹುಳು ಹೊಕ್ಕರೆ ಮುಗಿಯಿತು. ಅಷ್ಟಿಷ್ಟಕ್ಕೆ ಬಿಡುವವಳಲ್ಲ ದಾಕ್ಷಾಯಿಣಿ. ಯೋಚನೆ ಮಾಡಿ ದಣಿದಳು. ಅಮ್ಮ, ಅಪ್ಪನಿಂದಲೂ ಈಗ ಸಹಾಯ ಸಿಗುವ ಸಾಧ್ಯತೆ ಇಲ್ಲ. ನೀಲೇಶನ ಹೆಂಡತಿ ಶಿವಾನಿ ಬಂದ ಮೇಲೆ ಮನೆಯ ಆಡಳಿತವೇ ಬದಲಾಯಿತು. ಅವಳಿಗೆ ಇದೆಲ್ಲ ಇಷ್ಟವಾಗುತ್ತಿರಲಿಲ್ಲ. ನೀಲೇಶ ಹೆಂಡತಿ ಹಾಕಿದ ಗೆರೆ ದಾಟುವವನಲ್ಲ. ಅವನ ತಂದೆ, ತಾಯಿಯರೂ ತೆಪ್ಪಗೆ ಸೊಸೆಯ ಅಧೀನವಾಗಿದ್ದರು. ಇನ್ನು ಬೇರೆಲ್ಲಿಂದ... ಯೋಚಿಸುವಷ್ಟರಲ್ಲಿ ಅವನ ಗೆಳೆಯರ ಬಳಗ ನೆನಪಿಗೆ ಬಂದಿತ್ತು. ಸಾಲ ಕೇಳಲು ಒತ್ತಾಯಿಸಿದಳು. ಅವನು ಇಲ್ಲವೆಂದರೂ ಬಿಡದೇ ತಾನೇ ಅವರನ್ನೆಲ್ಲ ಕರೆದು ಪಾರ್ಟಿ ಮಾಡಿದಳು. ಉಪ್ಪಿಟ್ಟು, ಕೇಸರೀಭಾತು ಹಾಕುತ್ತ ಸತ್ಕರಿಸುತ್ತಿದ್ದಳು. ಶಿವಾನಂದ ನೋಡಿದರೆ ಕೇಳುವ ಮಾತೇ ಇಲ್ಲ. ಕೆಲಸಕ್ಕೆ ಬಾರದ್ದೆಲ್ಲ ಮಾತನಾಡುತ್ತ... "ಕಾಫಿ ಆಯ್ತಾ ದಾಕ್ಷಾ?" ಎಂಬ ಕೂಗು ಕೇಳಿಸಿದಾಗ ವಾಸ್ತವಕ್ಕೆ ಬಂದಳು. ಫಿಲ್ಟರ್ ಆಗಲೇ ತುಂಬಿತ್ತು. ಕಾಫಿ ಮಾಡಿ ಲೋಟ ತುಂಬಿಸಿ ತಂದಳು.

**ಶಂಭು "ಹೌದಪ್ಪ, ನೀನ್ಹೇಳೋದು ಹದಿನಾರಾಣೆ ಸತ್ಯ. ಸಿಕ್ಕಾಪಟ್ಟೆ ಸಾಲ ಮಾಡಿ ನಾವೇನಾದರೂ ಗೊಟಕ್ ಎಂದುಬಿಟ್ಟರೆ ಹೆಂಡತಿ, ಮಕ್ಕಳು ಬೀದಿ ಪಾಲೇ" ಎಂದ. ದಾಕ್ಷಾಯಿಣಿಯ ಮೈ ನಡುಗಿ ಒಂದು ಕ್ಷಣದಲ್ಲಿ ಬೆವರಿಟ್ಟಿತು.**

"ತಿಂಡಿ ಚೆನ್ನಾಗಿತ್ತು ಅತ್ತಿಗೆ. ಕಾರೂ ಚೆನ್ನಾಗಿದೆ. ಇದು ಕಾರಿನ ಪಾರ್ಟೀನಾ?" ಎಂದ ಸುಧೀರ. ಹೇಳಲು ತಿಳಿಯದೇ ಒಂದು ಕ್ಷಣ ತಡವರಿಸುತ್ತ "ಹ್ಞಾಂ, ಆಂ, ನನಗೇನೋ ಈ ಬೇಸಿಕ್ ಮಾಡೆಲ್‌ಗಿಂತ ಇನ್ನೂ ಒಳ್ಳೆ ಹೈ ಎಂಡ್ ಗಾಡೀನೆ ತೊಗೊಳೋ ಆಸೆ. ಕೊಳ್ಳೋವಾಗ ತುಸು ಕಷ್ಟವಾದರೂ ಒಳ್ಳೆಯದೇ ಕೊಂಡು ಬಿಟ್ಟರೆ..." ಎಂದು ವಿಷಯಕ್ಕೆ ಪೀಠಿಕೆ ಹಾಕಿದಳು. "ಯಾವುದಕ್ಕೆ ಹೈ ಎಂಡ್ ಅಂತೀರಾ ಅತ್ತಿಗೆ? ಡಿಸೈರ್, ಎರ್ಟಿಗಾ, ಹೋಂಡಾ ಸಿಟಿ, ಹೀಗೆ ಎಷ್ಟೊಂದು ಕಾರುಗಳು ಹತ್ತರಿಂದ ಹದಿನೈದು ಲಕ್ಷ ದಾಟುತ್ತವೆ. ಆಮೇಲೆ ಐವತ್ತು ಲಕ್ಷದವರೆಗೆ ಬಿ.ಎಮ್.ಡಬ್ಲ್ಯೂ ಕಾರುಗಳಿವೆ. ರೋಲ್ಸ್, ರಾಯ್ಸ್, ಗೆಲಾರ್ಡೋ ಮುಂತಾದವು ಕೋಟಿಗಳಾಗುತ್ತವೆ. ಇನ್ನು ಸ್ವಂತ ವಿಮಾನ, ಹೆಲಿಕಾಪ್ಟರ್ ಇಟ್ಟುಕೊಂಡವರಿದ್ದಾರೆ. ಅವರನ್ನೆಲ್ಲ ನೋಡ್ತಾ ಕಂಪೇರ್ ಮಾಡಕ್ಕಾಗುತ್ತಾ? ನಮ್ಮ ಯೋಗ್ಯತೆ ನಮಗೆ. ಇನ್ನೊಬ್ಬರೊಂದಿಗೆ ಇಂಥಾ ವಿಷಯಗಳಲ್ಲಿ ಸ್ಪರ್ಧೆಗೆ ಬಿದ್ದರೆ ಕೈಗೆ ಸಿಗೋದು ಚಿಪ್ಪೇ. ಅವೆಲ್ಲ ನಮ್ಮ ಕೈಗೆ ಎಟುಕಲ್ಲ. ಸುಮ್ಮನೆ ಮನಸ್ಸು ಕಹಿ ಮಾಡಿಕೊಳ್ಳುವ ಬದಲು ಇರುವುದರಲ್ಲೇ ತೃಪ್ತಿ ಪಡೋದು ಒಳ್ಳೆಯದು" ಎಂದವನನ್ನು ಉಳಿದವರೂ ಅನುಮೋದಿಸಿದರು. "ಹಾಸಿಗೆ ಇದ್ದಷ್ಟೇ ಕಾಲು ಚಾಚು ಅಂತ ಸುಮ್ನೆ ಹೇಳಿದಾರಾ?"ಎಂದ ದಿಲೀಪ.

ಶಿವಾನಂದ "ಎಲ್ಲ ವಸ್ತುಗಳು ಹಾಗೇ ಕಣ್ರೋ. ಬಾನಿಗೆ ಎಲ್ಲೆ ಇಲ್ಲದಂತೆ ನಮ್ಮ ಆಸೆಗಳಿಗೂ ಸೀಮೆಯೇ ಇಲ್ಲ. ಅವು ಅಸೀಮ... ಅನಂತ... ನಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಜೇಬಿಗೆ ಭಾರವಾಗದಂತೆ ಖರೀದಿಸುವದೇ ಜಾಣತನ" ಎಂದು ಅರ್ಥಪೂರ್ಣವಾಗಿ ಹೆಂಡತಿಯತ್ತ ನೋಡುತ್ತ ಶರಾ ಬರೆದ. ಶಂಭು "ಹೌದಪ್ಪ, ನೀನ್ಹೇಳೋದು ಹದಿನಾರಾಣೆ ಸತ್ಯ. ಸಿಕ್ಕಾಪಟ್ಟೆ ಸಾಲ ಮಾಡಿ ನಾವೇನಾದರೂ ಗೊಟಕ್ ಎಂದುಬಿಟ್ಟರೆ ಹೆಂಡತಿ, ಮಕ್ಕಳು ಬೀದಿ ಪಾಲೇ"